

# ಚಂದ ಇದೇರಿ ನೌವಾರಿ ಸೀರಿ!

■ ಆಶಾ ಎಸ್. ಕುಲಕರ್ಣಿ

ಎಷ್ಟೇ ಫ್ಯಾಷನಬಲ್ ಉಡುಗೆಗಳು ಬಂದರೂ ಸೀರೆ ತನ್ನ ಸ್ಥಾನವನ್ನು ಎಂದೂ ಬಿಟ್ಟುಕೊಡುವುದಿಲ್ಲ. ಹೀಗಾಗಿ ಹೆಣ್ಣಿಗೂ ಸೀರೆಗೂ ಅವಿನಾಭಾವ ಸಂಬಂಧ. ಸಂಪ್ರದಾಯಕ್ಕೂ, ಆಧುನಿಕತೆಗೂ ಸೈ ಎನಿಸುವ ಸೀರೆಗಳು ಎಂದಿಗೂ ಮಹಿಳೆಯರ ಮೆಚ್ಚು ಆಗಿದೆ. ಹಬ್ಬ ಹರಿದಿನಗಳಿಗೆ, ಮದುವೆ, ಮುಂಜಿಗಳಂಥ ಸಮಾರಂಭಗಳಿಗೆ ಸೀರೆಯಷ್ಟು ಸೂಕ್ತವಾದ ಉಡುಗೆ ಬೇರೆ ಇಲ್ಲ.

ಮದುವೆ ಸೀಸನ್ ಬಂದರೆ ಸಾಕು, ಮಹಿಳೆಯರು ತಮ್ಮ ವಾರ್ಡ್‌ರೋಬ್‌ನಿಂದ ರೇಷ್ಮೆ ಸೀರೆಗಳನ್ನು ಹೊರತೆಗೆದು ಆಯ್ಕೆ ಮಾಡಿಕೊಳ್ಳುವುದರಲ್ಲೇ ಬ್ಯುಸಿ. ಯಾವ ಸಂದರ್ಭಕ್ಕೆ ಯಾವ ಸೀರೆ ಉಡಬೇಕು ಎಂಬುದನ್ನು ನಿರ್ಧರಿಸುವುದೇ ದೊಡ್ಡ ಕೆಲಸ. ಅಲ್ಲದೆ ತಮ್ಮಲ್ಲಿರುವ ಹಳೇ ಸೀರೆಗಳನ್ನೇ ಮತ್ತೆ ಮತ್ತೆ ಧರಿಸಬೇಕಲ್ಲಪ್ಪ ಎಂಬ ಚಿಂತೆ ಇನ್ನೂ ಕೆಲವರಿಗೆ. ಇಂಥ ಸಂದರ್ಭದಲ್ಲಿ ಸೋಷಿಯಲ್ ಮೀಡಿಯಾಗಳಲ್ಲಿ ಅತ್ಯಂತ ಟ್ರೆಂಡಿಂಗ್‌ನಲ್ಲಿರುವ ಸೀರೆಗಳ ಸಾಲಿನಲ್ಲಿ ಮಹಾರಾಷ್ಟ್ರದ ನೌವಾರಿ ಸೀರೆ ಮಹಿಳೆಯರ ಕಣ್ಣಿಗೆ ಬಿದ್ದಿದೆ, ಕಣ್ಣುಕುಕ್ಕುವಂತೆ ಮಾಡಿದೆ. ಇದರಿಂದ ಯಾವ ಸೀರೆ ಉಡಬೇಕು ಎಂಬ ಚಿಂತೆಯೂ ತಪ್ಪಿದಂತಾಗಿದೆ.

ಮರಾಠಿಯಲ್ಲಿ ನೌ ಎಂದರೆ ಒಂಬತ್ತು ಮತ್ತು ವಾರಿ ಎಂದರೆ ಗಜ. ಎರಡೂ ಸೇರಿ ನೌವಾರಿ ಎಂಬ ಹೆಸರು ಬಂದಿದ್ದು, ಇದು ಸೀರೆಯ ಉದ್ದವನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಎಲ್ಲ ಮಹಿಳೆಯರು ಐದೂವರೆಯಿಂದ ಆರು ಗಜದ ಸೀರೆ ಉಡುತ್ತಾರೆ. ಆದರೆ ಇದು ಒಂಬತ್ತು ಗಜದ ಸೀರೆಯಾಗಿದೆ. ನೌವಾರಿ ಸೀರೆಯನ್ನು ಲುಗಾಡೆ, ಕಚ್ಚೆ, ನವವರಿ ಸೀರೆ, ಕಷ್ಟ ಸೀರೆ ಮತ್ತು ಸಕಾಚಾ ಎಂದೂ ಕೂಡ ಕರೆಯಲಾಗುತ್ತದೆ. ಮುಖ್ಯವಾಗಿ, ಇದು ಮಹಾರಾಷ್ಟ್ರ ಪ್ರದೇಶದ ಮಹಿಳೆಯರು ಧರಿಸುವ ಸಾಂಪ್ರದಾಯಿಕ ಸೀರೆಯಾಗಿದೆ. ಈ ಸೀರೆಯನ್ನು ಕಂಡ ಮಹಿಳೆಯರು 'ನೌವಾರಿ ಸೀರಿ, ಭಾರೀ ಇದೇರಿ' ಎಂದು ಹುಬ್ಬೇರಿಸುವಂತಾಗಿದೆ.

ನೌವಾರಿ ಸೀರೆಗಳು ಹತ್ತಿ ಸೀರೆಗಳಾಗಿದ್ದು, ಸೀರೆ ಸ್ಕರ್ಟ್ ಅಥವಾ ಪೆಟಿಕೋಟ್ ಇಲ್ಲದೆಯೂ ಧರಿಸಬಹುದು.

### ಇತಿಹಾಸ

ಹಿಂದೆ ಪೇಶ್ವೆಗಳ ಕಾಲದಲ್ಲಿ ಮರಾಠಾ ಸಾಮ್ರಾಜ್ಯದ ಮಹಿಳೆಯರು ಯುದ್ಧದ ಅವಧಿಯಲ್ಲಿ ಪುರುಷ ವೀರರಿಗೆ ಸರಿಸಮಾನವಾಗಿ ಯುದ್ಧಗಳಲ್ಲಿ ಹೋರಾಡಲು ಹಾಗೂ ತಮ್ಮ ಕೌಶಲ್ಯ ಮತ್ತು ದೈಹಿಕ ಸಾಮರ್ಥ್ಯವನ್ನು ಪ್ರದರ್ಶಿಸುವ ಸಲುವಾಗಿ ಈ ತರಹದ ಸೀರೆಗಳನ್ನು ಬಳಸುತ್ತಿದ್ದರು. ಇವುಗಳನ್ನು ಪ್ಯಾಂಟ್ ರೀತಿಯಲ್ಲಿ ಧರಿಸುವ ಕಾರಣ ಮಹಿಳೆಯರು ಇದನ್ನು ಧರಿಸಲು ಮುಜುಗರ ಪಡುವ ಅಗತ್ಯವಿರಲಿಲ್ಲ. ಆ ಕಾರಣದಿಂದ ಅಂದಿನ